ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ಶಾಸಕಾಂಗ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 9-12-205

# ಅಧಿವೇಶನ 3 ದಿನ ಕಡಿತ: ಕಲಾಪ ನಾಳೆಯೇ ಅಂತ್ಯ

ಕ.ಪ್ರ 9/12/20

## ಡಿ.15ರವರೆಗೂ ನಡೆಯಬೇಕಿದ್ದ ವಿಧಾನಮಂಡಲ ಗ್ರಾಪಂ ಚುನಾವಣೆ ಹಿನ್ನೆಲೆಯಲ್ಲಿ ಡಿ.10ಕ್ಕೇ ಅಂತ್ಯ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಗ್ರಾಮ ಪಂಚಾಯಿತಿ ಚುನಾವಣೆಯ ಹಿನ್ನೆಲೆಯಲ್ಲಿ ವಿಧಾನಮಂಡಲ ಅಧಿವೇಶನವನ್ನು ಡಿ.10ಕ್ಕೆ(ಗುರುವಾರ) ಮೊಟಕುಗೊಳಿಸಲುತೀರ್ಮಾನಿಸಲಾಗಿದೆ ಎಂದು ಎಂದು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಕಟಿಸಿದ್ದಾರೆ.



ವಿಧಾನಮಂಡಲಅಧಿವೇಶನ ಡಿ.15 ರವರೆಗೆ ನಡೆಯಬೇಕಿತ್ತು. ಆದರೆ, ಗ್ರಾ.ಪಂ. ಚುನಾವಣೆ ಹಿನ್ನೆಲೆಯಲ್ಲಿ ಸದನವನ್ನು ಮೊಟಕುಗೊಳಿಸುವುದು ಸೂಕ್ತ ಎಂಬ ನಿರ್ಧಾರಕ್ಕೆ ಸದನ ಕಾರ್ಯ ಕಲಾಪ ಸಮಿತಿ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಸದನವನ್ನು ಡಿ.10ಕ್ಕೆ ಮೊಟಕುಗೊಳಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಮಂಗಳವಾರ ಸದನ ಕಾರ್ಯಕಲಾಪ ಸಮಿತಿ ಸಭೆ ಬಳಿಕ ಶುರುವಾದ ಕಲಾಪದ ವೇಳೆ ಸಮಿತಿಯ ನಿರ್ಧಾರಗಳನ್ನು ಸದನದ ಮುಂದಿಟ್ಟ ಅವರು, ಸದನ ಮೊಟಕು ಹಿನ್ನೆಲೆಯಲ್ಲಿ ಶುಕ್ರವಾರ, ಸೋಮವಾರ ಹಾಗೂ ಮಂಗಳವಾರ ಕಲಾಪ ನಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

# ಅಧಿವೇಶನ 3 ದಿನ ಕಡಿತ: ಕಲಾಪ ನಾಳೆಯೇ ಅಂತ್ಯ

◄ ಮೊದಲ ಪುಟದಿಂದ    ಕ.ಪ್ರ 9/12/20

ಅಧಿವೇಶನದ ಕೊನೆಯ ಎರಡು ದಿನಗಳಾದ ಬುಧವಾರ ಹಾಗೂ ಗುರುವಾರ ಸರ್ಕಾರವು ಸುಗ್ರೀವಾಜ್ಞೆ ಮೂಲಕ ಹೊರಡಿಸಿರುವ ಕಾಯಿದೆಗಳನ್ನು ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗುವುದು. ಉಳಿದಂತೆ ಯಾವುದಾದರೂ ಮಹತ್ವದ ಕಾಯಿದೆಗಳನ್ನು ಮಂಡಿಸಿ ಒಪ್ಪಿಗೆ ಪಡೆಯಬೇಕಿದ್ದರೆ ಚರ್ಚೆ ಮಾಡಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.



ಗುರುವಾರ ಪೂರಕ ಅಂದಾಜುಗಳ ಬಗ್ಗೆಯೂ ಚರ್ಚಿಸಲಾಗುವುದು ಎಂದು ಮಾಹಿತಿ ನೀಡಿದರು.

**ಮುಂದಿನ ಅಧಿವೇಶನದಲ್ಲಿ 'ಒಂದು ರಾಷ್ಟ್ರ -ಒಂದು ಚುನಾವಣೆ' ಚರ್ಚೆ:** ಡಿ.14 ಹಾಗೂ 15ರಂದು 'ಒಂದು ರಾಷ್ಟ್ರ ಹಾಗೂ ಒಂದು ಚುನಾವಣೆ' ಎಂಬ ವಿಶೇಷ ಚರ್ಚೆ ನಡೆಸಲು ನಿರ್ಧರಿಸಲಾಗಿತ್ತು. ಗ್ರಾಪಂ ಚುನಾವಣೆ ಸಮಯದಲ್ಲಿ ಚರ್ಚೆ ಬೇಡ ಎಂದಿದ್ದಾರೆ. ಇದೊಂದು ಮಹತ್ವ ಹಾಗೂ ಗಂಭೀರವಾದ ವಿಷಯವಾಗಿದ್ದು, ಇಡೀ ದೇಶದಲ್ಲಿ ಕರ್ನಾಟಕ ವಿಧಾನಸಭೆಯೇ ಮೊದಲು ಈ ಬಗೆಗಿನ ಚರ್ಚೆ ಪ್ರಾರಂಭಿಸುತ್ತಿದೆ. ಈ ವಿಷಯವನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಲಿದ್ದು, ಮುಂದಿನ ಅಧಿವೇಶನವರೆಗೆ ಸದಸ್ಯರು ಇದರ ಬಗ್ಗೆ ಅಧ್ಯಯನ ನಡೆಸಿ ಉಚಿತ ಸಲಹೆಗಳನ್ನು ನೀಡಬೇಕು ಎಂದು ಕೋರಿದರು.